# ಆಹಾ ಸುದ್ದಿ!

★ ಸಸಿತೋಟ



ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಈ ವರ್ಷದ ಐಜಿ ನೊಬೆಲ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೋಳಿಯ ಹಿಂಭಾಗಕ್ಕೆ ಕೋಲು ಸಿಕ್ಕಿಸಿದರೆ ಅದು ಪೆಡಂಭೂತದಂತೆ ನಡೆಯುತ್ತದೆ ಎಂದು ಸಂಶೋಧನೆ ಮಾಡಿದ ಬ್ರುನೊ ಗ್ರಾಸಿ ಎಂಬಾತನಿಗೆ ಜೀವಶಾಸ್ತ್ರ ವಿಭಾಗದಲ್ಲಿ ಈ ಪ್ರಶಸ್ತಿ ನೀಡಲಾಯ್ತಂತೆ. ಪೆಡಂಭೂತ ಹೇಗೆ ನಡೆಯುತ್ತದೆ ಎಂದು ನೋಡಿದವರು ಯಾರೂ ಇಲ್ಲ. ಆದರೆ ವೇದಿಕೆ ಮೇಲೆ ಅದರ ಪ್ರಾತ್ಯಕ್ಷಿಕೆ ನೀಡಿದ ಬ್ರುನೊ ಪೈಪೋಟಿ ಕೊಟ್ಟಿದ್ದು ಕೋಳಿಗೋ ಅಥವಾ ಪೆಡಂಭೂತಕ್ಕೋ ಅಥವಾ ರೂಪದರ್ಶಿಯ ಬೆಕ್ಕಿನ ನಡಿಗೆಗೋ ಎಂದು ಗೊತ್ತಾಗದೆ ಜನ ಚಪ್ಪಾಳೆ ತಟ್ಟಿದರಂತೆ.

ಹೈದರಾಬಾದ್‌ನ ಆಸ್ಪತ್ರೆಯೊಂದರ ಸಂಶೋಧನಾ ಸಹಾಯಕ ಭಾನು ಪ್ರಕಾಶ್ ಸೆಲ್ಫಿ ತೆಗೆಯುವ ಸಲುವಾಗಿಯೇ ಉದ್ಯೋಗ ಬಿಟ್ಟಿದ್ದಾನಂತೆ. ದಿನವಿಡೀ ಮೊಬೈಲ್ ಕ್ಯಾಮೆರಾದಿಂದ ಸೆಲ್ಫಿ ತೆಗೆಯುವ ಈತನ ಗುರಿ ವಿಶ್ವ ದಾಖಲೆ ಮಾಡುವುದು. ಸೆಲ್ಫಿ ತೆಗೆಯುತ್ತ ಕಾಲಹರಣ ಮಾಡುವುದು ಹುಡುಗಿಯರ ಕೆಲಸ ಎಂದು ಲೇವಡಿ ಮಾಡುವವರ ಎದುರು ಈ ಭಾನು ಹುಡುಗರಿಗೂ ಸಮಾನತೆಯ ಗೌರವ ತಂದು ಕೊಟ್ಟಿದ್ದಾನೆ.



ಬ್ರಿಟನ್ನಿನ ಈ ಅಜ್ಜ ರೆಗ್ ಇಮ್ರೆ ಎರಡನೇ ವಿಶ್ವ ಯುದ್ಧದಲ್ಲಿ ಸ್ಟೀರಿಂಗ್ ಹಿಡಿದವನು 93ರ ಈ ಇಳಿ ವಯಸ್ಸಿನಲ್ಲೂ ಬಿಟ್ಟಿಲ್ಲವಂತೆ. ಕಿವುಡತನದಿಂದಾಗಿ ಚಿಕ್ಕವನಿದ್ದಾಗ 'ಯಾವುದಕ್ಕೂ ಬಾರದವ' ಎಂದು ಶಿಕ್ಷಕರಿಂದ ಸರ್ಟಿಫಿಕೇಟ್ ಪಡೆದಿದ್ದ ಈತ ಈ 76 ವರ್ಷಗಳಲ್ಲಿ ಸುಮಾರು 170 ವಾಹನಗಳ ಚಾಲನೆ ಮಾಡಿದ್ದಾನಂತೆ, ಅದೂ ಒಂದೇ ಒಂದು ಅಪಘಾತವನ್ನೂ ಮಾಡದೆ. ರೇಸ್‌ನಲ್ಲೂ ಪರಿಚಿತ ಮುಖ. ಶಿಕ್ಷಕ ಕೊಟ್ಟ ಸರ್ಟಿಫಿಕೇಟ್ ಅನ್ನು ಯಾವತ್ತೋ ಎಸೆದುಬಿಟ್ಟಿರುವ ಇಮ್ರೆ ಜನ ಕೊಟ್ಟ 'ರಾಕೆಟ್' ಎಂಬ ಸರ್ಟಿಫಿಕೆಟ್ ಅನ್ನು ಸ್ಟೀರಿಂಗ್‌ಗೆ ಅಂಟಿಸಿಕೊಂಡಿದ್ದಾನಂತೆ.



ಆಸ್ಟ್ರೇಲಿಯಾದ ಈ 14 ತಿಂಗಳ ಮಗು ಆಲಿಯಾ ಕಾಂಗರೂ ಮರಿ ಜೊತೆ ಸ್ನೇಹ ಬೆಳೆಸಿಕೊಂಡಿದ್ದು, ಈ ಅಪರೂಪದ ಸಂಗತಿ ಜಗತ್ತಿನಲ್ಲೇ ಮೊದಲನೆಯದಂತೆ. ಹುಟ್ಟಿದ ಕೆಲವೇ ದಿನಗಳಲ್ಲಿ 'ಲವ್ ಯೂ ಆಲಿಯಾ' ಎಂದುಸಿರಿರುವ ಕಾಂಗರೂ ಮರಿ ಮಗುವಿಗೆ ಇದುವರೆಗೂ ಯಾವುದೇ ಅಪಾಯ ಮಾಡಿಲ್ಲವಂತೆ.

ಮಿಸ್ಸೌರಿಯ ಅಪರೂಪದ ಪ್ರಾಣಿಗಳ ರಕ್ಷಣಾ ಕೇಂದ್ರದಲ್ಲಿ ಹಳದಿ ನೀರು ಹಾವೊಂದು ಗಂಡಿನ ಸಂಪರ್ಕ ಇಲ್ಲದೆಯೇ ಮರಿ ಹಾಕಿದೆಯಂತೆ. ಕಳೆದ ಎಂಟು ವರ್ಷಗಳಿಂದ ಈ ಕೇಂದ್ರದಲ್ಲಿ ಬಂಧಿಯಾಗಿರುವ ಹಾವು ಕಳೆದ ವರ್ಷವೂ ಎರಡು ಮರಿಗಳಿಗೆ ಇದೇ ರೀತಿ ಜನ್ಮ ನೀಡಿ ಸುದ್ದಿಯಾಗಿತ್ತು. ವಿಜ್ಞಾನಿಗಳು ಇದಕ್ಕೆ 'ಪಾರ್ಥೆನೊಜೆನೆಸಿಸ್' ಎಂಬ ಜೈವಿಕ ಪ್ರಕ್ರಿಯೆಯ ಕಾರಣ ನೀಡಿದ್ದಾರೆ. ಓ ಗಂಡಸೇ, ನಿನಗೆ ಧಿಕ್ಕಾರ ಎಂದು ವೇದಿಕೆಯ ಬದಲು ಕೇಂದ್ರದಲ್ಲಿ ಬಂಧಿಯಾಗಿದ್ದುಕೊಂಡೇ ಘೋಷಿಸಿದ ಹಾವಿಗೆ ಅಭಿನಂದನೆ ನೀಡಬಹುದು.



ಇಟಲಿಯ ಮಿಲಾನ್‌ನಲ್ಲಿ ಈ ಅವಳಿ ಕಟ್ಟಡಗಳ ಬಾಲ್ಕನಿಗಳಲ್ಲಿ 900 ಮರಗಳು ಬೆಳೆದಿವೆಯಂತೆ. ರಸ್ತೆ ಅಗಲೀಕರಣ, ಕಟ್ಟಡ ನಿರ್ಮಾಣ ಎಂದು ಬೆಂಗಳೂರಿನಲ್ಲಿ ಮರ ಕಡಿಯುವವರಿಗೆ ಒಳ್ಳೆ ಐಡಿಯಾ. ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡಲಂತೂ ಸಾಧ್ಯವಾಗಲಿಲ್ಲ, ಮಿಲಾನ್‌ನಂತೆ ಮಾಡುತ್ತೇವೆ ಎಂದು 'ಅಜೆಂಡಾ'ದಲ್ಲಿ ಸೇರಿಸಿಕೊಳ್ಳಬಹುದು.